

ಬುಗುಡಿ ಸ್ತ್ರೀ ಶಕ್ತಿಯ ಸಂಕೇತವಾಗಿ, ಮುತ್ತೈದೆತನದ ಪ್ರತೀಕವಾಗಿ ಇಂದಿಗೂ ತನ್ನ ಗೌರವವನ್ನು ಉಳಿಸಿಕೊಂಡಿದೆ. ಕರ್ನಾಟಕ ಮಾತ್ರವಲ್ಲದೆ, ನೆರೆಯ ಕೇರಳ, ತಮಿಳುನಾಡು, ಮಹಾರಾಷ್ಟ್ರದ ಸಂಸ್ಕೃತಿಯಲ್ಲಿಯೂ ಈ ಬುಗುಡಿಗೆ ಶತಮಾನಗಳಿಂದ ವಿಶೇಷ ಮಾನ್ಯತೆಯಿದೆ.



# ಬುಗುಡಿಗಿಂತ ಒಡವೆ ಬೇಕೆ?

■ **ಅರ್ಪಿತರಾಣಿ ಎ.ಎಸ್.**



ನವಿಲುಗರಿಯ ನಾಜೂಕು, ಮುತ್ತಿನ ನಯ, ಪರಂಪರೆಯ ನೆನಪು, ಅಜ್ಜಿಯ ಒಡವೆಗೆ ಆಧುನಿಕ ಲಯ, ಹಿಂದಿನ ಸೊಗಡು, ಇಂದಿನ ಸೊಗಸು ಎಲ್ಲವನ್ನೂ ಬೆಸೆದ 'ಬುಗುಡಿ' ಇಂದು ಕಿವಿಯಂಚಿನಲ್ಲಿ ಕುಳಿತು ನಾರಿಯರ ಅಂದವನ್ನು ಹೆಚ್ಚಿಸುತ್ತಿದೆ. ಕಾಲಚಕ್ರ ಉರುಳಿದಂತೆ ಫ್ಯಾಷನ್ ಲೋಕದಲ್ಲಿ ಎಷ್ಟೇ ಹೊಸತನ ಬಂದರೂ, ಹಳೆಯ ಬೇರು ಹೊಸ ಚಿಗುರು ಎಂಬಂತೆ ಈ ಪುರಾತನ ಆಭರಣ ಮತ್ತೆ ಯುವತಿಯರ ಮನಗೆದ್ದಿದೆ.

ಹೆಣ್ಣಿನ ಸೌಂದರ್ಯವನ್ನು ವರ್ಣಿಸುವಾಗ ಕಣ್ಣು, ಮೂಗು ಮತ್ತು ಮುಖದ ಲಕ್ಷಣಗಳ ಜೊತೆ ಎದ್ದು ಕಾಣುವುದು ಆಕೆಯ ಕಿವಿಯಲ್ಲಿರುವ ಓಲೆ. ಪ್ರಾಚೀನ ಕಾಲದಿಂದಲೂ ಕಿವಿಯೋಲೆಗೆ ವಿಶಿಷ್ಟ ಸ್ಥಾನವಿದೆ. ಅದರಲ್ಲೂ ಕಿವಿಯ ಮೇಲ್ಭಾಗದ ಮೃದುವಾದ ಅಂಚಿನಲ್ಲಿ ರಾಣಿಯಂತೆ ಕುಳಿತು ಕಂಗೊಳಿಸುವ ಬುಗುಡಿ ಹೆಣ್ಣಿನ ಅಂದವನ್ನು ದುಪ್ಪಟ್ಟು ಮಾಡುತ್ತಿತ್ತು. ಕೆನ್ನೆ ಸರಪಣಿಗಳಿಗೆ ಲಾಕರ್‌ಗಳಾಗಿ ಕೆಲಸ ಮಾಡುತ್ತಾ ನಮ್ಮ ಅಜ್ಜಿ, ಮುತ್ತಜ್ಜಿ, ಅಮ್ಮಂದಿರ ಕಿವಿಯಲ್ಲಿ ಕಂಗೊಳಿಸುತ್ತಿದ್ದ ಈ ಅಂದಗಾತಿಯರು ಇಂದು ಜಾಗತಿಕ ಫ್ಯಾಷನ್ ವೇದಿಕೆಗಳಲ್ಲಿ ಮೋಡಿ ಮಾಡುತ್ತಿದ್ದಾರೆ.

ಕರ್ನಾಟಕದ ಮಣ್ಣಿನ ಸೊಗಡಿನಲ್ಲಿ ಬುಗುಡಿಗೆ ಅಗ್ರಸ್ಥಾನವಿದೆ. ಅದರಲ್ಲೂ ಮಲೆನಾಡು ಹಾಗೂ ಉತ್ತರ ಕರ್ನಾಟಕದಲ್ಲಿ ಬುಗುಡಿ ಕೇವಲ ಆಭರಣವಲ್ಲ, ಅದೊಂದು ಭಾವನೆ. ಉತ್ತರ ಕರ್ನಾಟಕ ಭಾಗದಲ್ಲಿ ಬುಗುಡಿ ಇಲ್ಲದೆ ಮುತ್ತೈದೆಯ ಅಲಂಕಾರ ಅಪೂರ್ಣ ಎಂಬ ಮಾತಿದೆ. ಮದುವೆ ಸಮಾರಂಭಗಳಲ್ಲಿ ಹೆಣ್ಣಿಗೆ ಬುಗುಡಿ ಇಡುವುದು ಒಂದು ಪವಿತ್ರ ಸಂಪ್ರದಾಯವೇ ಆಗಿತ್ತು.

ಬುಗುಡಿ ಸ್ತ್ರೀ ಶಕ್ತಿಯ ಸಂಕೇತವಾಗಿ, ಮುತ್ತೈದೆತನದ ಪ್ರತೀಕವಾಗಿ ಇಂದಿಗೂ ತನ್ನ ಗೌರವವನ್ನು ಉಳಿಸಿಕೊಂಡಿದೆ. ಕರ್ನಾಟಕ ಮಾತ್ರವಲ್ಲದೆ, ನೆರೆಯ ಕೇರಳ, ತಮಿಳುನಾಡು, ಮಹಾರಾಷ್ಟ್ರದ ಸಂಸ್ಕೃತಿಯಲ್ಲಿಯೂ ಈ ಬುಗುಡಿಗೆ ಶತಮಾನಗಳಿಂದ ವಿಶೇಷ ಮಾನ್ಯತೆಯಿದೆ.